# ಸಂಸತ್ ಭವನ ನವೀಕರಣ ನಕ್ಷೆ

ನವದೆಹಲಿ: ಸಂಸತ್ ಭವನ ಕಟ್ಟಡ, ಕೇಂದ್ರ ಸರ್ಕಾರದ ಕಾರ್ಯಾಲಯ (ಸೆಕ್ರೆಟರಿಯೆಟ್) ಮತ್ತು ಇಂಡಿಯಾ ಗೇಟ್‌ನಿಂದ ರಾಜಪಥ ವರೆಗಿನ ಮೂರು ಕಿ.ಮೀ. ಕೇಂದ್ರ ಪ್ರದೇಶದ (ಸೆಂಟ್ರಲ್ ವಿಸ್ಟಾ) ಅಭಿವೃದ್ಧಿ ಯೋಜನೆ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ ಆರಂಭಿಸಿದೆ.

» **ಗುಜರಾತ್ ಕಂಪನಿಗೆ ಗುತ್ತಿಗೆ**

ಈ ಬಗ್ಗೆ ವಾಸ್ತುಶಿಲ್ಪ ಸಲಹೆ ನೀಡಲು ಅಹಮದಾಬಾದ್ ಮೂಲದ ಎಚ್‌ಸಿಪಿ ಡಿಸೈನ್ ಪ್ಲಾನಿಂಗ್ ಕಂಪನಿಯನ್ನು ನೇಮಿಸಲಾಗಿದೆ ಎಂದು ಯೋಜನೆಯ ಉಸ್ತುವಾರಿ ನೋಡಿಕೊಳ್ಳುವ ನಗರಾಭಿವೃದ್ಧಿ ಸಚಿವಾಲಯ ಪ್ರಕಟಿಸಿದೆ. ಬಿಮಲ್ ಪಟೇಲ್ ಈ ಕಂಪನಿಯ ಮುಖ್ಯಸ್ಥರು. ಗಾಂಧಿ ನಗರದ ಕೇಂದ್ರ ಸೆಕ್ರೆಟರಿಯೆಟ್ ಮತ್ತು ಅಹಮದಾಬಾದ್‌ನಲ್ಲಿ ಸಬರಮತಿ ನದಿಪಾತ್ರ ಮರುಅಭಿವೃದ್ಧಿ ಯೋಜನೆಗಳನ್ನು ನಿರ್ವಹಿಸಿದ ಅನುಭವ ಈ ಕಂಪನಿಗಿದೆ. ವಾರಾಣಸಿಯ ಮಂದಿರ ಸಮುಚ್ಛಯ, ಮುಂಬೈ ಬಂದರು ಸಮುಚ್ಛಯ ಅಭಿವೃದ್ಧಿಪಡಿಸಿದ್ದಲ್ಲದೆ ಐಐಎಂ ಹೈದರಾಬಾದ್‌ನ ಹೊಸ ಕ್ಯಾಂಪಸ್ ನಿರ್ಮಾಣವನ್ನೂ ಮಾಡಿದೆ. ಯೋಜನೆಯ ಸಲಹಾ ವೆಚ್ಚ 448 ಕೋಟಿ ರೂಪಾಯಿ ಆಗಬಹುದೆಂದು ಅಂದಾಜು ಮಾಡಲಾಗಿತ್ತು.

## ಡೆಡ್‌ಲೈನ್ ನಿಗದಿ

ಸೆಂಟ್ರಲ್ ವಿಸ್ಟಾ ಕಾಮಗಾರಿಯನ್ನು 2021ರ ನವೆಂಬರ್‌ನೊಳಗೆ ಮುಗಿಸುವಂತೆ ಕೇಂದ್ರ ಲೋಕೋಪಯೋಗಿ ಇಲಾಖೆಗೆ (ಸಿಪಿಡಬ್ಲುಡಿ) ಸೂಚಿಸಲಾಗಿದೆ. ಸಂಸತ್ ಭವನ ಕಟ್ಟಡವನ್ನು 2022 ಮಾರ್ಚ್‌ನೊಳಗೆ ಹಾಗೂ ಸೆಂಟ್ರಲ್ ಸೆಕ್ರೆಟರಿಯೆಟ್ ಕಾಮಗಾರಿಯನ್ನು 2024 ಮಾರ್ಚ್‌ನೊಳಗೆ ಮುಗಿಸುವ ಗಡುವು ವಿಧಿಸಲಾಗಿದೆ.

## 250 ವರ್ಷಕ್ಕೆ ಯೋಜನೆ

ರಾಷ್ಟ್ರ ರಾಜಧಾನಿಗೆ ಆಧುನಿಕ ಸ್ಪರ್ಶ ನೀಡುವುದಲ್ಲದೆ ಮುಂದಿನ 250 ವರ್ಷಗಳ ಅಗತ್ಯಗಳನ್ನು ಪೂರೈಸುವ ರೀತಿಯಲ್ಲಿ ಸಜ್ಜುಗೊಳಿಸುವುದು ಯೋಜನೆಯ ಮುಖ್ಯ ಉದ್ದೇಶ. ಮರುಅಭಿವೃದ್ಧಿ ಯೋಜನೆಯ ಅಂಗವಾಗಿ ಯಾವುದೇ ಹಳೆಯ ಪಾರಂಪರಿಕ ಕಟ್ಟಡಗಳನ್ನು ಕೆಡವುದಿಲ್ಲ. ಸಂಸತ್ ಭವನದ ಬಾಹ್ಯ ಸ್ವರೂಪವನ್ನು ಬದಲಾಯಿಸುವ ಪ್ರಶ್ನೆಯೇ ಇಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.